ಕುಡಿಸಲು, ಕೆಸರಾದ ಅವುಗಳ ಮೈತೊಳೆಸಲು ಹೊಳೆಗಿಳಿಯುತ್ತಿದ್ದರು. ನಮ್ಮೂರ ಎಮ್ಮೆಗಳಂತೂ ದಿನದ ಹೆಚ್ಚಿನ ಭಾಗ ಈ ಹೊಳೆಯಲ್ಲಿ ಮುಳುಗಿಕೊಂಡು ಜಲಕ್ರೀಡೆಯ ಸುಖವನ್ನು ಅನುಭವಿಸುತ್ತಿದ್ದವು. ಅವುಗಳ ಮೈಗಂಟಿದ ಜಿಗಣೆಗಳನ್ನು ಕುಟುಕುತ್ತಾ ಮೀನುಗಳು ಹೊಟ್ಟೆತುಂಬಿಸಿಕೊಳ್ಳುತ್ತಿದ್ದವು. ಊರ ಮಕ್ಕಳೆಲ್ಲಾ ಶಾಲೆಯಿಲ್ಲದ ದಿನಗಳಲ್ಲಿ ಹೊಳೆಯೊಳಗೆ ಎಮ್ಮೆಗಳಂತೆ ಹೊರಳಾಡಿಕೊಂಡು, ಮರುದಿನ ಸಿಂಬಳ ಸೀಂಟುತ್ತಾ ಅಮ್ಮಂದಿರಿಂದ ಬೈಗುಳಗಳ ಮಳೆ ಸುರಿಸಿಕೊಳ್ಳುತ್ತಿದ್ದರು. ನಮ್ಮೂರ ಮೀನುಪ್ರೇಮಿಗಳಿಗೆ ಮೀನು ನೀಡುವ ಹೊಳೆಯಲ್ಲಿಯೇ ಹೆಂಗಸರು ಕೊಚ್ಚಿದ ಮೀನುಗಳನ್ನು ಶುಚಿಯಾಗಿ ತೊಳೆಯುತ್ತಿದ್ದರು. ರಾತ್ರಿಯೂಟಕ್ಕೆ ಮಣ್ಣಿನ ಮಡಿಕೆಯಲ್ಲಿ ಮೀನಿನ ಹೋಳುಗಳು ಬೇಯುತ್ತಿರುವಾಗಲೇ ಮುಟ್ಟಾದ ಹೆಂಗಸರು ಮುಟ್ಟಿನ ಬಟ್ಟೆ ತೊಳೆಯಲು ಹೊಳೆಗಿಳಿದು ಹೊಳೆಯ ನೀರನ್ನು ಕೆಂಪಾಗಿಸುತ್ತಿದ್ದರು.

ಮಳೆಗಾಲ ಬಂದರೆ ಸಾಕು, ಹೊಳೆಗೆ ಅದೆಲ್ಲಿಂದ ನೀರು ತುಂಬುತ್ತಿತ್ತೋ? ಕೆಂಬಣ್ಣದಲ್ಲಿ ಹರಿಯುತ್ತಾ ಅರ್ಧಕ್ಕರ್ಧ ಊರನ್ನೇ ತನ್ನ ಸುಪರ್ದಿಗೆ ತೆಗೆದುಕೊಳ್ಳುತ್ತಿತ್ತು. ಹೊಳೆಯೊಂದಿಗೆ ಹರಿದು ಬರುವ ಹಾವುಗಳು ಅವರಿವರ ಮನೆಗಳನ್ನು ಹೊಕ್ಕು ಜೀವಬೆದರಿಕೆಯನ್ನೊಡ್ಡುತ್ತಿದ್ದವು. ಹೊಳೆಯಲ್ಲಿ ತೇಲಿಬರುವ ತೆಂಗಿನ ಕಾಯಿಯನ್ನೋ, ಮರದ ದಿಮ್ಮಿಗಳನ್ನೋ ಊರಿನ ಯುವಕರು ತಮ್ಮ ಪ್ರಾಣವನ್ನು ಪಣವಾಗಿಟ್ಟು ಹಿಡಿದು ತರುತ್ತಿದ್ದರು. ಹೊಳೆಯ ಆರ್ಭಟಕ್ಕೆ ನಾವು ಮಕ್ಕಳು ಹೆದರಿದರೆ, ದೊಡ್ಡವರು ಹಿಂದೆ ಹೊಳೆ ಇನ್ನೂ ಭಯಂಕರವಾಗಿರುತ್ತಿತ್ತೆಂದೂ, ಬೇಸಿಗೆಯಲ್ಲಿಯೂ ಹೊಳೆದಾಟಲು ತೆಪ್ಪವನ್ನು ಇಳಿಸುತ್ತಿದ್ದರೆಂದೂ, ಹೊಳೆಯಲ್ಲಿ ಮೊಸಳೆಗಳು ವಾಸವಾಗಿದ್ದವೆಂದೆಲ್ಲ ಕಥೆ ಹೇಳುತ್ತಿದ್ದರು. ಅಂದು ಕನಸಿನಲ್ಲಿ ಹೊಳೆಯಿಂದ ಬಾಯಿಬಾಚಿ ಹೊರಬಂದ ಮೊಸಳೆ ನಮ್ಮನ್ನೇ ನುಂಗಲು ಬರತ್ತಿರುವಂತೆ ಕಂಡು ಹಾಸಿಗೆಯೆಲ್ಲ ಒದ್ದೆಯಾಗುತ್ತಿತ್ತು! ಮಳೆಗಾಲದಲ್ಲಿ ನಮ್ಮೂರಿನ ದೊಡ್ಡ ಸಮಾಚಾರವೆಂದರೆ ಹೊಳೆ ಎಲ್ಲೆಲ್ಲಿ, ಎಷ್ಟೆಷ್ಟು ಮೇಲೆ ಬಂದಿದೆ ಎಂಬುದೇ ಆಗಿತ್ತು. ಮಳೆಗಾಲ ಕಳೆದು ಚಳಿಗಾಲದಲ್ಲಿ ಊರನ್ನು ಇನ್ನಷ್ಟು ತಂಪಾಗಿಸಿ ನಡುಗಿಸುವ ಹೊಳೆ, ಬೇಸಿಗೆ ಬರುತ್ತಿದ್ದಂತೆಯೇ ತನ್ನ ಕಸುವನ್ನು ಕಳೆದುಕೊಳ್ಳುತ್ತಿತ್ತು. ಎಲ್ಲಿ ಬೇಕಾದರಲ್ಲಿ ಮಕ್ಕಳು ಹೊಳೆಯನ್ನು ದಾಟಿ ಶಾಲೆಗೆ ಹೋಗುವಂತಾಗುತ್ತಿತ್ತು.

ಇಂತಹ ಹೊತ್ತಿನಲ್ಲಿಯೇ ನಮ್ಮೂರ ಸುಗ್ಗಿ ಬೆಳೆಯ ಬಿತ್ತನೆಯ ಕಾಲ. ಮಳೆಗಾಲದ ಬೆಳೆಯನ್ನು ಹೊಳೆಯೇ ತೊಳೆದು ಹೋಗುವುದರಿಂದ ಬೇಸಿಗೆಯಲ್ಲಿ ಬೆಳೆಯುವ ಭತ್ತವೇ ನಮ್ಮೂರಿನ ಅನ್ನದ ತುತ್ತಾಗಿತ್ತು. ಗದ್ದೆಗಳಿಗೆ ನಿರಂತರವಾಗಿ ನೀರೂಡಿಸುವ ಸಲುವಾಗಿ ಅರ್ಧ ಮೈಲಿಗೊಂದರಂತೆ ಹೊಳೆಗೆ ಕಟ್ಟುಹಾಕುವ ಕಾಯಕ ಶುರುವಾಗುತ್ತಿತ್ತು. ಹರಿವ ಹೊಳೆಯನ್ನು ಕಟ್ಟಿಹಾಕುವುದೆಂದರೆ ಅದೇನೂ ಸುಲಭದ ಮಾತಾಗಿರಲಿಲ್ಲ. ನಿಗದಿತ ದಿನದಂದು ಊರೊಗ್ಗಟ್ಟಿನ ಸಭೆಮಾಡಿ ಕಟ್ಟುಹಾಕುವ ಕೆಲಸವನ್ನು ಪ್ರಾರಂಭಿಸುತ್ತಿದ್ದರು. ಮೊದಲು ಕಾಡಿನಿಂದ ಕೊಂಬೆಗಳನ್ನೂ ಸೇರಿದಂತೆ ಸೊಪ್ಪಿನ ಹೊರೆಗಳನ್ನು ರಾಶಿಮಾಡಬೇಕು. ಕಿಂಡಿಯನ್ನು ಮಾಡಲು ಮರದ ದಿಮ್ಮಿಗಳನ್ನು ಕತ್ತರಿಸಬೇಕು. ಅವೆಲ್ಲವನ್ನೂ ಹರಿವ ಹೊಳೆಗೆ ಅಡ್ಡವಾಗಿ ಇಡುತ್ತಾ, ತೊಳೆದುಹೋಗದಂತೆ ಮಣ್ಣಿನ ರಾಶಿಯನ್ನು ನಡುನಡುವೆ ಸುರಿಯುತ್ತಾ ಬರಬೇಕು. ಒಡ್ಡಿನಲ್ಲಿ ಹೆಚ್ಚಾದ ನೀರು ಹರಿದುಹೋಗುವಂತೆ ಮೂರು ತೂಬುಗಳನ್ನಿಡಬೇಕು. ಹೀಗೆ ಕಟ್ಟು ಹಾಕುವ ಹಿರಿಯ ತಜ್ಞರ ಸಲಹೆಯಂತೆ ಊರಿನ ತರುಣ ಪಡೆ ಮೂರುದಿನ ಕೆಲಸ ಮಾಡುತ್ತಿತ್ತು. ಕಟ್ಟು ಹಾಕಿದ ಮಾರನೆಯ ಬೆಳಗು ಇಡಿಯ ಊರಿನಲ್ಲಿ ಕೆರೆಬಾವಿಗಳೆಲ್ಲ ಒಮ್ಮಿಂದೊಮ್ಮೆಲೇ ತುಂಬುವ ಪವಾಡ ನಡೆಯುತ್ತಿತ್ತು. ಒಣಗಿದ್ದ ಗಿಡಗಂಟಿಗಳೆಲ್ಲ ವಾರವೊಂದರಲ್ಲಿ ಮತ್ತೆ ಚಿಗುರಿ ನಳನಳಿಸುತ್ತಿದ್ದವು. ಹೊಳೆಯಿಂದ ಗದ್ದೆಗಳಿಗೆ ನೀರುಣಿಸುವ ವರೆಗಳೆಂಬ ಕಾಲುವೆಗಳು ನವೀಕರಣಗೊಂಡು ಕೆಂಬಣ್ಣದಲ್ಲಿ ಕಂಗೊಳಿಸುತ್ತಿದ್ದವು. ಅವುಗಳಿಂದ ಗದ್ದೆಗೆ ನುಗ್ಗುವ ನೀರು ಮಣ್ಣಿನಲ್ಲಿರುವ ಹುಳಗಳನ್ನೆಲ್ಲ ತಪತಪನೆ ಹೊರಬರುವಂತೆ ಮಾಡಿ, ಹುಳಗಳನ್ನು ನುಂಗಲು ಹಕ್ಕಿಗಳ ಸಾಲೇ ಧಾಂಗುಡಿಯಿಡುತ್ತಿದ್ದವು. ಅಲ್ಲಿಗೆ ಎತ್ತುಗಳು ನೊಗಗಳನ್ನು ಹೊತ್ತು ಕೆಳಗಿಳಿದು ಹೂಟಿಯ ಹಾಡಿನ ರಾಗ ಇಡಿಯ ಊರನ್ನು ತುಂಬಿಕೊಳ್ಳುತ್ತಿತ್ತು. ಬೀಜ ಮೊಳಕೆಯೊಡೆದು, ಸಸಿಯಾಗಿ, ಹುಲ್ಲಾಗಿ, ಭತ್ತದ ತೆನೆಯಾಗಿ ಪೈರು ಒಣಗಿ ಸುಗ್ಗಿಯಾದ ಮೇಲೆಯೇ